ಅಧ್ಯಕ್ಷರು: ಏನೂ ಆಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೇ, ದಯವಿಟ್ಟು ನಾವಂತೂ ಮಧ್ಯಾಹ್ನ ಇರಲಿಕ್ಕೆ ಆಗುವುದಿಲ್ಲ. ಮಧ್ಯಾಹ್ನ ಮೂರು ಗಂಟೆಗೆ ಕಾರ್ಯಕ್ರಮಗಳನ್ನು ಫಿಕ್ಸ್ ಮಾಡಿಕೊಂಡಿದ್ದೇವೆ. ಬೇಕಾದರೆ ಅಧಿವೇಶನವನ್ನು ಇನ್ನೂ ಒಂದು ವಾರ ನಡೆಸಿ. ನಮ್ಮದೇನೂ ತಕರಾರಿಲ್ಲ. ಆದರೆ ಮಧ್ಯಾಹ್ನ ನಾವು ಹಲವಾರು ಕಾರ್ಯಕ್ರಮಗಳನ್ನು ನಿಗದಿ ಮಾಡಿದ್ದೇವೆ. ನಾವಂತೂ ಇರಲಿಕ್ಕಾಗುವುದಿಲ್ಲ. ದಯವಿಟ್ಟು ತಾವು ಸಹಕಾರವನ್ನು ಕೊಡಬೇಕು.

ಅಧ್ಯಕ್ಷರು: ತಮ್ಮ ಪರವಾಗಿ ಮಾನ್ಯ ಸುರೇಶ್ ಕುಮಾರ್ ಅವರೆಲ್ಲಾ ಇರುತ್ತಾರೆ.

ಶ್ರೀ ಎಸ್. ಸುರೇಶ್ ಕುಮಾರ್: ನಮ್ಮ ಪಾರ್ಟಿ ಕಡೆಯಿಂದಲೇ ಯಾರೂ ಕೂಡ ಇರುವುದಕ್ಕಾಗುವುದಿಲ್ಲ. ಆ ಒಂದು ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ.

ಅಧ್ಯಕ್ಷರು: ಇಲ್ಲಿ ಕೇಳಿ. ಕೆಲವು ನಾವು ಎರಡು ಗಂಟೆಗೆ ಮುಗಿಸಬೇಕೆಂದರೂ ಸಂಜೆವರೆಗೂ ಕುಳಿತಿರುತ್ತೇವಲ್ಲಾ ಬೇಕಾದಷ್ಟು ಸಲ ಕುಳಿತಿದ್ದೇವಲ್ಲಾ. ಆ ರೀತಿ ನೀವು ಅಡ್ಜಸ್ಟ್ ಮಾಡಿಕೊಳ್ಳದಿದ್ದರೆ ಹೇಗೆ? ಅದೂ ಕೊನೆಯ ದಿವಸ. ತಾವು ದಯವಿಟ್ಟು ಅಡ್ಜಸ್ಟ್ ಮಾಡಿಕೊಳ್ಳಿ. ಈಗ ಸದನವನ್ನು ಮೂರು ಗಂಟೆಗೆವರೆಗೆ ಮುಂದೂಡುತ್ತಿದ್ದೇನೆ.

(ಸದನವು 1 ಗಂಟೆ 59 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ಮಧ್ಯಾಹ್ನ ಮೂರು ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

(ಸದನವು 4.00 ಗಂಟೆಗೆ ಪುನರ್ ಸಮಾವೇಶಗೊಂಡಿತು. ಸನ್ಮಾನ್ಯ ಸಭಾಧ್ಯಕ್ಷರು ಶ್ರೀ ಎಂ.ವಿ. ವೆಂಕಟಪ್ಪನವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

3. ಸಭೆಯ ಮುಂದಿಡಲಾದ ಕಾಗದ ಪತ್ರಗಳು:-

ಅಧ್ಯಕ್ಷರು: ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು. ಕಾರ್ಯದರ್ಶಿಯವರು ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದಿಡುವುದು.

ಶ್ರೀ ಟಿ. ರಾಜಣ್ಣ:- (ಕಾರ್ಯದರ್ಶಿಯವರು ವಿಧಾನಸಭೆ) :- ಮಾನ್ಯ ಅಧ್ಯಕ್ಷರೆ,

i) ರಾಜ್ಯಪಾಲರಿಂದ ಉಲ್ಲೇಖಿಸಲಾಗಿರುವ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ, 1998 ಅನುಬಂಧ VII, VIII, IX ಸಭೆ ಮುಂದೆ ಮಂಡಿಸುತ್ತೇನೆ.

ii) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಹಾಗೂ ಇತರ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕ, 2004. ಅನುಬಂಧ VII, VIII, IX ಸಭೆ ಮುಂದೆ ಮಂಡಿಸುತ್ತೇನೆ.

iii) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ 2004.

4. ಪ್ರಕಟಣೆ

ಅಧ್ಯಕ್ಷರು: ಮಂಡಿಸಲಾಯಿತು.

ಅಧ್ಯಕ್ಷರು: ಈಗ ಪ್ರಕಟಣೆ. ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿರುತ್ತದೆ.

'ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನಪರಿಷತ್ತು ಈ ಕೆಳಕಂಡ ವಿಧಾನಸಭೆಯ ವಿಧೇಯಕಗಳನ್ನು ದಿನಾಂಕ: 13.2.2004 ರಂದು ಯಾವುದೇ ತಿದ್ದುಪಡಿ ಇಲ್ಲದೆ ಅಂಗೀಕರಿಸಿರುತ್ತಾರೆಂದು ತಿಳಿಸಿರುತ್ತಾರೆ.

1. ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ ವಿಧೇಯಕ 2004
2. ತಿರುವಿವಾಹ ಪ್ರತಿಬಂಧಕ (ಕರ್ನಾಟಕ ತಿದ್ದುಪಡಿ) ವಿಧೇಯಕ 2004
3. ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ 2004

ಅಧ್ಯಕ್ಷರು: ವಿಶ್ವನಾಥ್ ರವರೇ, ಈಗ ತಮ್ಮ ವಿಧೇಯಕವನ್ನು ತೆಗೆದುಕೊಳ್ಳೋಣ.

5. ಶಾಸನ ರಚನೆ

i ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ, 2004

†ಶ್ರೀ ಜೆಚ್. ವಿಶ್ವನಾಥ್ (ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೇ, ಈಗಾಗಲೇ ಚರ್ಚೆ ಪ್ರಾರಂಭವಾಗಿದೆ. ಮಾನ್ಯ ಶಿವಾನಂದ ಪಾಟೀಲರು ಮಾತನಾಡಿದ್ದಾರೆ.

ಶ್ರೀ ಎಸ್. ಶಿವಾನಂದ ಪಾಟೀಲ್: ಮಾನ್ಯ ಅಧ್ಯಕ್ಷರೆ, ನಾವು ನಿಮಗೆ ಮಂಡಿಸಿರಿ ಎಂದೆ, ಆದರೆ ಇನ್ನೂ ಚರ್ಚೆನೇ ಪ್ರಾರಂಭವಾಗಿಲ್ಲ, ಅವರು ಮಂಡಿಸಲಿ.

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ): ಮಾನ್ಯ ಅಧ್ಯಕ್ಷರೇ, ಯಾವುದೇ ಚರ್ಚೆ ಇಲ್ಲದೆ ಇದನ್ನು ಪಾಸ್ ಮಾಡೋಣ. ಅದಕ್ಕೆ ನಮ್ಮ ತಕರಾರು ಇಲ್ಲ. ಇದರ ಬಗ್ಗೆ ನಾವು ಮಂತ್ರಿಗಳಿಗೆ ಹೇಳಿದ್ದೇವೆ. ಏಮಾಬಾತ್ಮಕ ವಿಷಯವನ್ನು ತೆಗೆದುಬಿಟ್ಟರೆ ಒಳ್ಳೆಯದು. ಯಾವುದು ಏಮೆ ಮಾಡಿಸಲು ಬ್ಯಾಂಕುಗಳಿಗೆ ವಿಶೇಷ ಒಬ್ಬಂದ ಬೇಕಾಗಿದೆ. ಇದು ಅವಶ್ಯ ಇದೆ. ಕೋರ್ಟ್ ಹೇಳಿದೆ. ಇದೊಂದಕ್ಕೆ ಅವರು ಒಪ್ಪಿಕೊಂಡು ಉಳಿದದ್ದು ಎಲ್ಲಾ ಬಿಟ್ಟು ಬಿಟ್ಟರೆ ನಾವು ಯಾವುದೇ ಚರ್ಚೆಯಿಲ್ಲದೆ ಒಪ್ಪುತ್ತೇವೆ. ಅದು ಬೇಕಾಗುತ್ತದೆ. ಅದನ್ನು ಮಾಡಿಕೊಡಿ. ನೀವು ರಿಸರ್ವ್ ಬ್ಯಾಂಕ್‌ನದ್ದು ಮಾಡಬೇಕಾಗುತ್ತದೆ. ರಿಸರ್ವ್ ಬ್ಯಾಂಕ್ ಆದೇಶ ಇದೆ. ಅದು ಆ್ಯಕ್ಟ್‌ನಲ್ಲಿ ಅನಿವಾರ್ಯ ಇದೆ. ಉಳಿದದ್ದು ಯಾವುದೂ ಬೇಕಾಗುವುದಿಲ್ಲ. ಆ ಆ್ಯಕ್ಟ್‌ನ ಕಾನ್ಸೆಪ್ಟ್ ಬೇರೆ ಇದೆ. ಆ ಕಾರಣದಿಂದ ಮಾನ್ಯ ಮಂತ್ರಿಗಳ ಜೊತೆ ಮಾತನಾಡಿದ್ದೇವೆ. ಇಷ್ಟು ಕೊಟ್ಟುಬಿಟ್ಟರೆ ನಮ್ಮದೇನೂ ತಕರಾರು ಇಲ್ಲ. ಇಲ್ಲದೆ ಇದ್ದರೆ ಚರ್ಚೆ ಬಹಳ ದೀರ್ಘವಾಗಿ ಹೋಗುತ್ತದೆ. ಅನಿವಾರ್ಯವಾಗಿ ಮತ್ತೆ ಕೊನೆ ದಿವಸ ನಾವು ಅಲ್ಲಿ (ಬಾವಿಗೆ) ಬಂದು ಮತ್ತೆ ನೀವು ಅದಕ್ಕೆ ಕೊಂಬರೆ ಪಡುವುದು. ಮುಂದೆ ಹೋಗುವುದು ಆಗಬಾರದು. ಪರಿಸ್ಥಿತಿ ಆ ಮಟ್ಟಕ್ಕೆ ಹೋಗುತ್ತದೆ. ಈಜೋದು ಬೇಡ ಎಂದು ಅವರ ಹತ್ತಿರ ಹೇಳಿಕೊಂಡಿದ್ದೇವೆ. ಇನ್ನು ಎರಡು ತಿಂಗಳ ಮೇಲೆ ಬೇಕಾದರೆ ನೋಡಬಹುದು ಎಂದರೆ ಮಾಡೋಣ.

ಅಧ್ಯಕ್ಷರು: ನೀರು ಇದ್ದರೆ ತಾನೇ ನೀವು ಈಜೋದು.

ಶ್ರೀ ಎಸ್.ಎಸ್. ಪಾಟೀಲ್: ಇದೊಂದು ಆ್ಯಕ್ಟ್‌ನಲ್ಲಿ ಸರ್ಕಾರದವರು ಕೈ ಹಾಕಬೇಡಿರಿ. ಇದರ ಮೇಲೆ ಬಹಳ ವಿವರವಾಗಿ ಚರ್ಚೆಯಾಗಬೇಕಾಗುತ್ತದೆ. ಇಲ್ಲದೇ ಇದ್ದರೆ ಜಂಟಿ ಸದನ ಸಮಿತಿಗೆ ಹೋಗಬೇಕಾಗುತ್ತದೆ. ಅದಕ್ಕಾಗಿ ನಾನು ಹೇಳುವುದು ಇದು ಬೇಕಾಗುತ್ತದೆ. ನಾನು ಒಪ್ಪಿಕೊಳ್ಳುತ್ತೇನೆ, ಇದು ಒಂದು ಭಾಗ ಅವರು ಒಪ್ಪಿಕೊಂಡು ಖಂಡಿತವಾಗಿ ಯಾವ ಚರ್ಚೆ ಕೂಡ ಬೇಗ ಮುಗಿಸಿಬಿಡೋಣ.

ಶ್ರೀ ಜೆಚ್. ವಿಶ್ವನಾಥ್: ಮಾನ್ಯ ಅಧ್ಯಕ್ಷರೆ, ಮಾನ್ಯ ಪಾಟೀಲ್‌ರವರು ಇಲಾಖೆಯನ್ನು ನಡೆಸಿದಂತವರು. ಸೌಹಾರ್ದ ಕಾನೂನು ಬರುವಂತಹ ಸಂದರ್ಭದಲ್ಲಿ ಕೂಡ ಮಂತ್ರಿಯಾಗಿದ್ದವರು.